**ದೋ.ಸಾ. :43 ಫ್ರಾ.ಸಾ. : 58**

**ದಿನಾಂಕಃ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

14. ಆ ನಂತರ ದಿ. 06-12-2018 ರಂದು 1 ನೇ ಆರೋಪಿಯು ತಾನು ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದು, ಅದರಂತೆ ತನಿಖಾಧಿಕಾರಿಯು ನಮ್ಮನ್ನು, ಪಂಚರನ್ನು ಹಾಗೂ 1 ನೇ ಆರೋಪಿಯನ್ನು ಕುಳಗಿ ರಸ್ತೆಯ ಕೋಗಿಲೆ ಬನದ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ 1 ನೇ ಆರೋಪಿಯು ಒಂದು ಸ್ಥಳವನ್ನು ತೋರಿಸಿ, ತಾನು ಇದೇ ಸ್ಥಳದಲ್ಲಿ ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ ಎಂದು ತೋರಿಸಿದ ಮೇರೆಗೆ, ತನಿಖಾಧಿಕಾರಿಯು ಸದರಿ ಸ್ಥಳವನ್ನು ಪರಿಶೀಲಿಸಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ಆ ಸಮಯದಲ್ಲಿ ತನಿಖಾಧಿಕಾರಿಯ ಸೂಚನೆಯ ಮೇರೆಗೆ ನಾನು ನಿಪಿ-60 ಮತ್ತು 61 ರಂತೆ ಪೋಟೋ ತೆಗೆದಿರುತ್ತೇನೆ.

15. ಪ್ರೇಮ್ ಕುಮಾರನ ಕೊಲೆ ಆದ ನಂತರ 1 ನೇ ಆರೋಪಿಯು ತಲೆ ಮರೆಸಿಕೊಳ್ಳಲು ಚಾಸಾ-36 ರವರ ಕಾರನ್ನು ಬಳಸಿದ್ದು, ದಿ. 07-12-2018 ರಂದು ಸದರಿ ವಾಹನವನ್ನು ಚಾಸಾ-36 ರವರು ಠಾಣೆಗೆ ತಂದು ಹಾಜರು ಪಡಿಸಿದ್ದು, ಆ ಸಮಯದಲ್ಲಿ ತನಿಖಾಧಿಕಾರಿಯು ಪಂಚರ ಸಮಕ್ಷಮ ಸದರಿ ವಾಹವನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-73 ರಂತೆ ಪೋಟೋ ತೆಗೆದಿರುತ್ತೇನೆ. ಅದೇ ದಿನ 1 ನೇ ಆರೋಪಿಯು ತಾನು ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳಕ್ಕೆ ಹೋಗಲು ಬಳಸಿದ ವಾಹನವನ್ನು ಬೈತ್‌ಕೊಲದ ಅಲಿಗದ್ದದಲ್ಲಿರುವ ತನ್ನ ಕಚೇರಿಯ ಬಳಿ ನಿಲ್ಲಿಸಿಟ್ಟಿರುವುದ್ದಾಗಿ ಹೇಳಿದ್ದು, ಅದರಂತೆ ತನಿಖಾಧಿಕಾರಿಗಳು ನಮ್ಮನ್ನು, ಪಂಚರನ್ನು ಹಾಗೂ 1 ನೇ ಆರೋಪಿಯನ್ನು ಆತನ ಕಚೇರಿಯ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ 1 ನೇ ಆರೋಪಿಯು ತಾನು ಸಂಚು ರೂಪಿಸಲು ಹೋದ ಸ್ಥಳಕ್ಕೆ ಬಳಸಿದ ವಾಹವನ್ನು ತೋರಿಸಿದ್ದು, ಸದರಿ ವಾಹನವನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪರಿಶೀಲಿಸಿ, ಜಪ್ತು ಪಡಿಸಿಕೊಂಡಿದ್ದು, ಅವರ ಸೂಚನೆ ಮೇರೆಗೆ ನಾನು ನಿಪಿ-75 ರಂತೆ ಪೋಟೋ ತೆಗೆದಿರುತ್ತೇನೆ. ಈ ಮೇಲೆ ಹೇಳಿದ ಪೋಟೋಗಳನ್ನು ಪೋಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಇಲಾಖೆಯಿಂದ ಒದಗಿಸಲಾದ ಸೋನಿ ಹ್ಯಾಂಡಿ ಕ್ಯಾಮರದಿಂದ ತೆಗೆದಿರುತ್ತೇನೆ ಹಾಗೂ ಅವುಗಳನ್ನು ಕಾರವಾರದಲ್ಲಿರುವ ಡಿಜಿಟಲ್ ಪಾಯಿಂಟ್ ಪೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಮಾಡಿಸಿ, ನಂತರ ಅವುಗಳನ್ನು ಸಿ.ಡಿ. ಗೆ ಭರಣ ಮಾಡಿ, ಆ ನಂತರ ಸದರಿ ಪೋಟೋಗಳನ್ನು ಹಾಗೂ ಸಿ.ಡಿ. ಯನ್ನು 65 ಬಿ ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ.

16. ದಿ. 01-01-2019 ರಂದು 3 ನೇ ಆರೋಪಿಯಿಂದ ಜಪ್ತು ಪಡಿಸಿಕೊಂಡ ಚೈನನ್ನು ಪರಿಶೀಲಿಸಲು ತನಿಖಾಧಿಕಾರಿಯ ಸೂಚನೆ ಮೇರೆಗೆ ಅಕ್ಕಸಾಲಿಗರಾದ ಚಾಸಾ-37 ರವರನ್ನು ಕರೆದುಕೊಂಡು ಬಂದು ತನಿಖಾಧಿಕಾರಿಯ ಮುಂದೆ ಹಾಜರು ಪಡಿಸಿರುತ್ತೇನೆ. ಆ ನಂತರ ತನಿಖೆಗೆ ಸಹಕರಿಸಿದ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುತ್ತೇನೆ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.